Reg No M 1299 - 42nd Year - Sri 'Satyavadi' Mysore - 17-1-1958

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ
ಅ ಶೋ ೀ ಫಾ ರ್ಮ ಸಿ
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing
L. N. Press
Sivarampet, Mysore

ಸತ್ಯವಾದಿ

ಸ್ಥಾಪಕರು– ಅಂಬೆಮನೆ ಸಿಂಸ್ಕೇದಾರ್ ಎಂ. ವಿ ಸುಬ್ಬರಾಯರು [ಬಿಡಿಪ್ರತಿ 3 ಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ
ಸತ್ಯವಾದಿ ವಾರಾಂತ್ಯ ಪತ್ರಿಕೆ
ವಾರ್ಷಿಕಚಂದಾ ಅಂಚೆವೆಚ್ಚಸೇರಿ 1-80

ಭಾರತಕ್ಕೆ ರೂ. 145 ಕೋಟಿ ಅಮೆರಿಕಾದ ಆರ್ಥಿಕ ಸಹಾಯ

ಶ್ರೀರಂಗನಾಥ ದೇವಾಲಯದಲ್ಲಿ ಕಳವು

ಶ್ರೀರಂಗಪಟ್ಟಣ 16 — ಈ ದಿವಸ ವಂದಿ ಆಗಿರುವಂತೆ ಶ್ರೀರಂಗನಾಥ ದೇವಾಲಯದಲ್ಲಿ ರೂ. 15000 ಬೆಲೆಬಾಳುವ 152 ತೊಲೆಗಳಷ್ಟು ಭಂಗಾರ ಕಳ್ಳತನವಾಗಿದೆ. ಕಳ್ಳರು ಗರ್ಭ ಗುಡಿ ಬೀಗವನ್ನೊಡೆದಿರುವರು ಮತ್ತು ಶ್ರೀ ರಂಗನಾಥ ಸ್ವಾಮಿಯ ಪಾದಗಳ ಭಂಗಾರದ ಕವಚವನ್ನು ತೆಗೆದಿರುವರೆಂದು ಗೊತ್ತಾಗಿದೆ. ವಿಗ್ರಹದ ಮೇಲಿನ ಇತರ ಆಭರಣಗಳನ್ನು ಕಳ್ಳರು ಮುಟ್ಟಿಲ್ಲ ಕಳ್ಳರು ಪತ್ತೆ ಆಗಿಲ್ಲ.

ಕೇರಳದಲ್ಲಿ ಕಾಂಗ್ರೆಸ್ ?

ಪಾಲ್ಘಾಟ್ಚೆರಿ 16 — ಮುಂದಿನ ಕಾಂಗ್ರೆಸು ಅಧಿವೇಶನ ತಮ್ಮ ಪ್ರಾಂತದಲ್ಲಿ ನಡೆಯಬೇಕೆಂದು ಕೇರಳ ಪ್ರದೇಶ ಕಾಂಗ್ರೆಸು ಸಮಿತಿ ಆಹ್ವಾನಿಸಿದೆ ಆ ಆಹ್ವಾನವನ್ನು ಕೇರಳ ಪ್ರಾಂತ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಕೆ. ದಾಮೋದರ ಮೆನನ್ ಕಾಂಗ್ರೆಸು ಅಧ್ಯಕ್ಷ ಶ್ರೀಯುತ ಯು. ಎನ್ ಧೇಬಾರರಿಗೆ ಸಲ್ಲಿಸಿದರು. ನೂತನ ಕಾರ್ಯಕಾರಿ ಸಮಿತಿ ರಚನೆ ಆಗಿ ಈ ವಾರದ ಕೊನೆಯಲ್ಲಿ ಈ ಬಗ್ಗೆ ಘೋಷಿಸಲಾಗುವುದು.

ಹಂಗೇರಿ ಒಪ್ಪಿದೆ

ನವದೆಹಲಿ 15 — ಭಾರತದೊಡನೆ ವಾಣಿಜ್ಯ ಮತ್ತು ಇತರ ವ್ಯವಹಾರಗಳಿಗಾಗಿ ರೂಪಾಯಿಗಳ ಮೂಲಕ ಹಣ ಸಂದಾಯಮಾಡಲು ಹಂಗೇರಿ ಒಪ್ಪಿಕೊಂಡಿರುವುದಲ್ಲಿ ಇತ್ತೀಚಿನ ದೇಶವಾಗಿದೆ.

× ನವದೆಹಲಿ 16 — ವಿಮಾನ ಯಾನದರವನ್ನು ಸ್ವಲ್ಪ ಹೆಚ್ಚಿಸಲು ಭಾರತ ಏರ್ ಲೈನ್ಸ್ ಕಾರ್ಪೊರೇಷನ್ ಪರಿಶೀಲಿಸುತ್ತಿದೆ.

ಘಟನಾಭಂಗ ಹಿಂದಿ ತಂತ್ರ

ಮಧುರೆ 16 — ಪ್ರಮುಖ ಕಾಂಗ್ರೆಸಿಗರು ಮತ್ತು ಮಾಜಿ ಘಟನಾ ಸಮಿತಿಯ ಸದಸ್ಯರು ಆದ ಶ್ರೀ ಎಲ್. ಕೃಷ್ಣಸ್ವಾಮಿ ಭೌಂತಿಯವರು ಭಾರತ ಅಧ್ಯಕ್ಷರಿಗೆ ಬರೆದು, ಮನಿ ಆರ್ಡರು, ಅಂಚೆ ಕಾರ್ಡು ಮುಂತಾದವುಗಳಲ್ಲಿ ಇಂಗ್ಲೀಷು ಪದಗಳ ಬದಲು ಹಿಂದಿ ಪದಗಳನ್ನು ಉಪಯೋಗಿಸಿರುವದು ಭಾರತದ ಘಟನೆಗೆ ವಿರುದ್ಧವಾಗಿದೆ ಎಂದು ತಿಳಿಸಿರುವರು ಉತ್ತರದವರಿಂದ ಹಿಂದಿಯೇತರ ದಕ್ಷಿಣದ ಮೇಲೆ ಹಿಂದಿ ಬಲವಂತ ಅರೋಪಣೆ ಪರಿಹರಿಸಲು ಪ್ರಥಮ ಹೆಜ್ಜೆ ಆಗಿ, ಮನಿ ಆರ್ಡರು, ಅಂಚೆ ಕಾರ್ಡುಗಳ ಮೇಲೆ ಪ್ರಾದೇಶಿಕ ಭಾಷೆಗಳನ್ನು ಮುದ್ರಿಸಬೇಕೆಂದು ತಿಳಿಸಿರುವರು.

——

ಫಿರೋಜಪುರದ ಜಿಲ್ಲಾಧಿಕಾರಿಯವರು ಜಿಲ್ಲೆಯ 224 ಮಂದಿ ಖಾಯಂ ಪಟ್ವಾರಿಗಳು ಮತ್ತು ಕನಂಗೋಗಳಿಗೆ ಒಂದು ವಾರದ ಅವಧಿಯ ಕಾರಣತೋರಿ ನೋಟಿಸನ್ನಿತ್ತು, ಡಿಸೆಂಬರು 12 ರಿಂದ ರಜವಿಲ್ಲದೆ ಗೈರುಹಾಜರಿ ಆಗಿರುವ ಬಗ್ಗೆ ಮತ್ತು ಮುಷ್ಕರ ಹೂಡಿರುವ ಬಗ್ಗೆ ನಿವ್ಮನ್ನೇಕೆ ಕೆಲಸದಿಂದ ತೆಗೆಯಕೂಡದು ಎಂದು ಕೇಳಿದ್ದಾರೆ ಎಂದು ವರದಿ ಆಗಿದೆ

ಂ ಂ

ಶ್ರೀನಗರ 16 — ವಿಶ್ವಸಂಸ್ಥೆ ಕಾಶ್ಮೀರ ವಿಧ್ಯುಕ್ತಿಕೆಗಾಗಿ ಡಾ|| ಫ್ರಾಂಕ್ ಗ್ರಹಾಂ ನಾಳೆ ಬೆಳಿಗ್ಗೆ ನವದೆಹಲಿಯಿಂದ ಕರಾಚಿಗೆ ತೆರಳುವರು.

ಂ ಂ

ತಿರುವೇಂದ್ರಂ 16 — ಕೇಂದ್ರ ರಹಸ್ಯ ಶಾಖೆಯೊಡನೆ ಗುಪ್ತಾಚಾರ ನಡೆಸುತ್ತಿದ್ದನೆಂದು ಕೇರಳ ಕಮ್ಯುನಿಸ್ಟ ಪಕ್ಷ ತಿರುವೇಂದ್ರ ನಗರ ಸಮಿತಿ ಸದಸ್ಯ ಶ್ರೀ ನಟೇಶರನ್ನು ಪಕ್ಷದಿಂದ ತೆಗೆದಿದೆ

ವಾಷಿಂಗ್ಟನ್ 16 — ಭಾರತದ ಎರಡನೆಯ ಪಂಚವಾರ್ಷಿಕ ಯೋಜನೆಯ ಸಹಾಯಕ್ಕಾಗಿ, ಮುಖ್ಯವಾಗಿ ಸಾಲದ ರೂಪದಲ್ಲಿ 290000000 ಡಾಲರುಗಳ ಆರ್ಥಿಕ ಸಹಾಯವನ್ನು ಭಾರತಕ್ಕೆ ಕೊಡಲು ಅಮೇರಿಕಾ ಮುಂದುಬಂದಿದೆ. ಈ ಬಗ್ಗೆ ವ್ಯವಹರಿಸಲು ಭಾರತ ಸರ್ಕಾರದ ನಿಯೋಗವೊಂದು ವಾಷಿಂಗ್ಟನ್‌ಗೆ ಒರುವುದೆಂದು ಸರ್ಕಾರ ತಿಳಿಸಿದೆ.

——

ಮುಂಬೈ 15— ಬ್ರಿಟನ್ನಿನ ಪ್ರಧಾನ ಮಂತ್ರಿಗಳಾದ ವಿ|| ಹೆರಾಲ್ಡ್ ಮೆಕ್ಮಿಲ್ಲನ್‌ರವರು ಭಾರತಕ್ಕೆ ಆಗಮಿಸಿದಾಗ ದೆಹಲಿಯಲ್ಲಿ ಅವರಿಗೆ ನೀಡಲಾದ ಸ್ವಾಗತವನ್ನು ವಿವರಿಸುವ ಹಲವು ದೃಶ್ಯಗಳನ್ನು ಭಾರತ ಸರಕಾರದ ಚಲನಚಿತ್ರ ವಿಭಾಗದವರು ಸಿದ್ಧಗೊಳಿಸಿರುವ ಇತ್ತೀಚಿನ ವಾರ್ತಾ ಚಿತ್ರದಲ್ಲಿ ಅಳವಡಿಸಲಾಗಿದೆ.

ಪಾಲ್ಘಾಟ್ಚೆರಿ 16 — ಸ್ವಲ್ಪ ತೊಂದರೆ ಆಗಬಹುದಾದಾಗ್ಯೂ ಭಾರತದಲ್ಲಿನ 14 ರಾಷ್ಟ್ರಭಾಷೆಗಳಲ್ಲಿ ಯಾವುದನ್ನಾದರೂ ಅಧಿಕೃತ ಉದ್ದೇಶಗಳಿಗೂ ಕೂಡ ಉಪಯೋಗ ಮಾಡಬಹುದೆಂದು ಪಂ|| ನೆಹರು ತಿಳಿಸಿದರು. ಭಾರತದ ರಾಷ್ಟ್ರಭಾಷೆ ಇಂಗ್ಲೀಷು ಅಲ್ಲ ಮತ್ತು ಅದು ಹೋಗಬೇಕಾದುದು ಎಂದರು. ಮೈಸೂರಿನ ಮಾಜಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಭಾಷೆ ನಿರ್ಣಯದ ಬಗ್ಗೆ ಮಾತನಾಡುತ್ತಾ, ಕೇಂದ್ರದ " ಖಿಲ ಭಾರತ ಉದ್ದೇಶಗಳಿಗಾಗಿ ಇಂಗ್ಲೀಷು ಭಾರತದ ಅಧಿಕೃತ ಭಾಷೆ ಆಗಿರಬೇಕು ಎಂದರು.

ಜನವರಿ 26 ರಂದು ಉತ್ತರ ಪ್ರದೇಶ ಸರ್ಕಾರದಿಂದ ಅಲಹಾಬಾದು ಜಿಲ್ಲೆಯ 112 ಮಂದಿ 70 ವರ್ಷಕ್ಕೆ ಮೇಲ್ಪಟ್ಟ ವೃದ್ಧರು ವೃದ್ಧ ನಿವೃತ್ತ ವೇತನದ ಪ್ರಥಮ ಕಂತ್ನ್ನು ಪಡೆಯುವರು.

ಭಾರತೀಯ ಉದ್ಯೋಗಿ ಪತ್ತೆಯಿಲ್ಲ

ಕರಾಚಿ 16 — ಇಲ್ಲಿನ ಭಾರತ ಹೈ ಕಮಿಷನರ್ ಕಚೇರಿಯಲ್ಲಿನ ರಾಜತಾಂತ್ರಿಕ ಹುದ್ದೆಯಲ್ಲದಿರುವ ಉದ್ಯೋಗಿ ಶ್ರೀ ಇಂದರ್ ಪ್ರಕಾಶ್ ಬಾತ್ರಾ ಎಂಬವರು ಪತ್ತೆಯಿಲ್ಲ. ಪಾಕಿಸ್ತಾನ ವಿದೇಶ ಕಚೇರಿಗೆ ಕರ್ತವ್ಯ ತನಿಖೆ ನಡೆಸಲು ಕೋರಿದೆ ಕರಾಚಿಯ ಸದ್ದಾರಿನಲ್ಲಿ ಭಾನುವಾರ ಮಧ್ಯಾಹ್ನ ಶ್ರೀ ಬಾತ್ರಾ ಕಡೆಯ ಬಾರಿ ಕಂಡುಬಂದಿದ್ದರು ಮುಂದಿನ — ಸೋಮವಾರ ಮುದುವೆ ಆಗಲಿರುವ ಅವರು ದೆಹಲಿಗೆ ತೆರಳಬೇಕಾಗಿತ್ತು.

ಪಟವಾಟದಲ್ಲಿ ಸಾವು

ಮಕರ ಸಂಕ್ರಾಂತಿ ದಿನ ಅಹಮದಾಬಾದಿನಲ್ಲಿ ಬೆಳಿಗ್ಗೆ ಅರ್ಧ ಲಕ್ಷ ಜನ ಕಿರಿಯರು ಮತ್ತು ಹಿರಿಯರು ಗಾಳಿ ಪಟ ಬಿಡುವ ಆಟದಲ್ಲಿ ನಿರತರಾಗಿದ್ದರು ಅವರಲ್ಲಿನ ಗುಂಪುಗಳಲ್ಲಿ ಹೊಡೆದಾಟವಾಗಿ ಅನೇಕರು ಗಾಯಗೊಂಡರು ಓಡಾಟದಿಂದ ಗಾಳಿಪಟ ಅಡಿಸುವ ಕರುಣದಿಂದ ಜನ ಸಂಚಾರಕ್ಕೆ ತೊಂದರೆ ಆಗದಂತೆ ವಿಶೇಷ ಪೋಲೀಸು ಪಡೆ ವ್ಯವಸ್ಥೆ ಆಗಿದ್ದಿತು ಪಟ ಅಡಿಸುವುದರಲ್ಲಿ ಕಳೆದೆರಡು ವಾರಗಳಲ್ಲಿ 5 ಮಂದಿ ಯುವಕರು ಸತ್ತಿರುವರು

——

ಮದ್ರಾಸಿನಲ್ಲಿ ಕುದುರೆ ಪಂದ್ಯ ನಿಷೇಧಿಸುವ ಪ್ರಶ್ನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಗೊತ್ತಾಗಿದೆ

ನಾಳೆಯ ಪಂಚಾಂಗ

ವಿ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ
18 ಚತುರ್ದಶಿ ಮೂಲ

ತನ್ನನ್ನು ಹೊಂದಿದ್ದವರಿಗೆಲ್ಲಾ ದುರ್ದೆಶೆ ತಂದ ಭಾಗ್ಯತದ ವಜ್ರದ ಕಥೆ

(ನಿನ್ನೇ ಸಂಚಿಕೆಯಿಂದ ಮುಂದಕ್ಕೆ)

'ವಜ್ರ!' ಎಂದು ಕ್ಯಾಪ್ಟನ್ನನು ಆಶ್ಚರ್ಯಚಕಿತನಾಗಿ, ಅರಚಿಕೊಂಡನು: ಕೂಡಲೇ ಗಟ್ಟಿಯಾಗಿ ಈ ವಿಷಯವಾಗಿ ಮಾತನಾಡುವುದು ತಪ್ಪೆಂದೂ ಇದೇನಾದರೂ ಹಡಗಿನ ನೌಕರರು ಅಥವಾ ಮಾಲೀಕರಿಗೆ ಗೊತ್ತಾದರೆ ಕಷ್ಟಕರವೆಂದೂ ತಿಳಿದನು.

ನಂತರ ಡೆಕ್ ಮೇಲೆ ಸ್ವಲ್ಪ ಹೊತ್ತು ಶಂಕಾಯಿಸಿದನು; ಆಗ ಅವನಿಗೆ ಒಂದು ಯೋಚನೆ ಹೊಳೆಯಿತು: ಕ್ಯಾಪ್ಟನ್ನನು ಕೊಠಡಿಗೆ ಬಂದು ಸೋಮುವನ್ನು ಹೊರಕ್ಕೆ ಬಂದು ಗಾಳಿ ಮತ್ತು ಸುತ್ತಲಿನ ಸೋಟದ ಸುಖವನ್ನನುಭವಿಸಲು ಆಹ್ವಾನಿಸಿದನು.

ಸೋಮುವು ತನ್ನ ಮುಂದಿನ ಮಾರ್ಗದ ಕನಸು ಕಾಣುತ್ತಿದ್ದನು: ಕ್ಯಾಪ್ಟನ್ನಿನ ದಯಾಪರತೆಗೆ ಕೃತಜ್ಞನಾಗಿದ್ದನು; ಕೊಠಡಿಯಿಂದ ಹೊರಗೆ ಒಂದು, ಕ್ಯಾಪ್ಟನ್ನಿನ ಜೊತೆಯಲ್ಲಿ ನಿಂತನು; ತನ್ನನ್ನು ಕ್ಯಾಪ್ಟನ್ನನು ಬಿಡುವ ಪಟ್ಟಣದಲ್ಲಿ ತನ್ನ ಸ್ವತಂತ್ರ ಜೀವನವನ್ನು ಕುರಿತು ಯೋಚಿಸುತ್ತಿದ್ದನು; ಕ್ಯಾಪ್ಟನ್ನನು ಸ್ವಲ್ಪ ಹಣವನ್ನು ಕೊಡಬಹುದೆಂದೂ ಪ್ರಾರಂಭಿಸಬಹುದೆಂದೂ ಸೋಮು ಯೋಚಿಸುತ್ತಿದ್ದನು.

ಕ್ಯಾಪ್ಟ ವುತ್ತು ಸೋಮು ಡೆಕ್ಕಿನ ಅಂಚಿನಲ್ಲಿ ನಿಂತರು; ಕ್ಯಾಪ್ಟನನು ತನ್ನ ಕಠಿಣ ಕೈಗಳಿಂದ ಸೋಮುವಿನ ಕತ್ತನ್ನು ಹಿಡಿದು ಸಮುದ್ರಕ್ಕೆ ತಳ್ಳಿಬಿಟ್ಟನು: ಸೋಮು ನೀರಿನಲ್ಲಿ ಮುಳುಗಿ ಸತ್ತನು.

ಮುಂದಿನ ರೇವುಪಟ್ಟಣದಲ್ಲಿ ಕ್ಯಾಪ್ಟನ್ನನು ಅಂಗಡಿಗಳಿಗೆ ಹೋಗಿ ವಜ್ರವನ್ನು ಹಣವಾಗಿ ಪರಿವರ್ತಿಸಲು ಹೊರಟನು: ಒಬ್ಬ ಪಾರ್ಸಿ ವಜ್ರವ್ಯಾಪಾರಿಯನ್ನು ಕಂಡು ಅವನಿಗೆ ಆ ವಜ್ರವನ್ನು 15 ಸಾವಿರ ರೂಗಳಿಗೆ ಮಾರಿದನು.

ಕ್ಯಾಪ್ಟನ್ನಿಗೆ ಇದು ಒಳ್ಳೇ ಸಂಪತ್ತಾಯಿತು; ತನ್ನ ಮನೆಗೆ ಹೋದ ನಂತರ ಅಪತ್ಯಗಳು ಪ್ರಾರಂಭಿಸಿದವು; ಹಣವೆಲ್ಲಾ ಖರ್ಚಾಯಿತು; ಕೆಲ ತಿಂಗಳಲ್ಲಿ ತನ್ನದಾದ ಎಲ್ಲವನ್ನೂ ಕಳೆದುಕೊಂಡು ಚಿಂದಿಬಟ್ಟೆ ಉಟ್ಟು ಬೀದಿಯಲ್ಲಿ ಭಿಕಾರಿಯಾಗಿ ಅಲೆಯುವ ಸ್ಥಿತಿಗೆ ಬಂದನು: ಕಸ್ಟದಲ್ಲಿ ಹುಡುಗರು ಇವನನ್ನು ಗೇಲೀಮಾಡಲು ಹೊರಟರು: ಕಡೆಗೆ ತುಂಬಾ ದುಃಖಸ್ಥೆಯಲ್ಲಿ ಸತ್ತನು.

ಪಾರ್ಸಿಯ ವನ ವಜ್ರವ್ಯಾಪಾರದಲ್ಲಿ ಒಳ್ಳೇ ನಿಪುಣನಾಗಿದ್ದನು; ತನಗೆ ಮುಂದೆ ತುಂಬಾ ಲಾಭ ದೊರಕುವುದೆಂದು ದೃಢಪಡಿಸಿಕೊಂಡ ನಂತರ ಕ್ಯಾಪ್ಟನ್ನಿಗೆ ಅವನು 15000 ರೂಗಳನ್ನು ಕೊಟ್ಟಿದ್ದು.

ಈ ಪಾರ್ಸಿ ವರ್ತಕನು ಫ್ರೋರ್ಟ್ ಸೆಂಟ್ ಜಾರ್ಜಿನಲ್ಲಿದ್ದ ಈಸ್ಟ್ ಇಂಡಿಯಾ ಕಂಪೆನಿಯ ಕೌನ್ಸಿಲ್ ಸಭೆಯ ಪ್ರಮುಖ ಸದಸ್ಯನೊಬ್ಬನಿಗೆ ಕಲವು ವಜ್ರಗಳನ್ನು ಆಗಲೇ ಮಾರಿದ್ದನು; ಈ ಉತ್ತಮ ಸ್ಥಿತಿಯು ಇಂಗ್ಲೀಷನವನು ವಜ್ರಗಳ ಮೇಲೆ ಹೆಚ್ಚು ವ್ಯಾಮೋಹವುಳ್ಳವನಾಗಿದ್ದನೆಂಬುದು ಈ ಪಾರ್ಸಿಗೆ ಗೊತ್ತಿದ್ದಿತು.

ಅದು ನಿಜವಾಯಿತು; ಆ ವಜ್ರವನ್ನು ಆ ಇಂಗ್ಲೀಷನವನು ನೋಡಿದೊಡನೆಯೆ, ಹೇಗಾದರೂ ಅದನ್ನು ಪಡೆಯಬೇಕೆಂದು ನಿರ್ಧರಿಸಿದನು; ಪಾರ್ಸಿಯು ಅದಕ್ಕೆ 6 ಸಂಖ್ಯೆಯ ಭಾರಿ ಮೊತ್ತವನ್ನು ಹೇಳಿದನು; ತನ್ನ ಮನೆತನದ ಎಲ್ಲಾ ಆಸ್ತಿಯಾದರೂ ಅಷ್ಟು ಹಣವನ್ನು ತಾನು ಸೇರಿಸಲಾರೆನೆಂದು ಇಂಗ್ಲೀಷನವನು ತಿಳಿದಿದ್ದನು.

[ಕಡೇ ಭಾಗ ನಾಳೇ ಸಂಚಿಕೆಯಲ್ಲಿ

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತವಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್
ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ
ಲಿ ಮಿ ಟೆ ಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ಗ್ರೈಪ್ ಸಿರಪ್

ವುಡ್‌ಲ್ಯಾಂಡ್ಸ್

ಜನಪ್ರಿಯ 2 ನೇ ವಾರ

ದೇವಾನಂದ್ — ಕಲ್ಪನಾ ಕಾರ್ತಿಕ್
ಶಶಿಕಲಾ ಪಾತ್ರವಹಿಸಿರುವ

ನೌ ದೊ ಗ್ಯಾರ

Nau Do Gyara

ಅತ್ಯಮೋಘ ಹಿಂದಿ ಚಿತ್ರ

ದಿನವಹಿ 3 ಪ್ರದರ್ಶನಗಳು

ಉಮಾ ಟಾಕೀಸ್

ಅಮೋಘ 2 ನೇ ವಾರ

ಗುಣಸುಂದರಿ

(ತಮಿಳು)

ನಟವರ್ಗ– ಸಾವಿತ್ರಿ, ಜಮಿನಿ ಗಣೇಶ್
ಸಂಬಿಯಾರ್, ರಂಗರಾವ್, ಕರುಣಾನಿಧಿ

[ಪ್ರತಿದಿನ 3 ಆಟಗಳು]

ಪ್ರತಿ ಶುಕ್ರವಾರ, ಶನಿವಾರ, ಭಾನುವಾರ
ಬೆಳಗಿನ ಪ್ರದರ್ಶನ 10–30 ಕ್ಕೆ

Protect the cow

ಗೋ ಸಂರಕ್ಷಣೆ ಮಾಡಿ

ಅಪೆರಾ—

ಯಶಸ್ವಿ 5 ನೇ ವಾರ

ಮಾಯಾಬಜಾರ್

ಎನ್. ಟಿ. ರಾಮರಾವ್, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ಜೇಲಂಗಿ
ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ

ಪ್ರತಿ ದಿನ 3 ಆಟಗಳು

SHAKTI SUDHA

A Superb Tonic

Edited, Printed & Published by Dharma Prachara Nirata M S Krishna Rao at the Satyavadi Press Chamrajpura Mysore